# ಮುಖ್ಯ ಚುನಾವಣಾಧಿಕಾರಿಗಳ ಕಚೇರಿ, ಕರ್ನಾಟಕ

ನಿರ್ವಾಚನ ನಿಲಯ, ಶೇಷಾದ್ರಿ ರಸ್ತೆ, ಬೆಂಗಳೂರು-560 001

ಸಂ.ಸಿಆಸುಇ 05 ಚುವಿಪ 2014 ದಿನಾಂಕ: 21-05-2014

## ಪತ್ರಿಕಾ ಪ್ರಕಟಣೆ

ಕರ್ನಾಟಕ ವಿಧಾನ ಪರಿಷತ್ತಿನ ಈ ಕೆಳಕಂಡ ನಾಲ್ಕು ಸದಸ್ಯರುಗಳ ಅವಧಿಯು ನಿವೃತ್ತಿಯ/ರಾಜಿನಾಮೆಯ ಕಾರಣದಿಂದ ದಿನಾಂಕ: 30-06-2014 ರಂದು ಮುಕ್ತಾಯಗೊಳ್ಳಲಿರುತ್ತದೆ:-

| ಕ್ರ.ಸಂ. | ಮಾನ್ಯ ಸದಸ್ಯರುಗಳ ಹೆಸರು | ಕ್ಷೇತ್ರದ ಹಸರು |
|---|---|---|
| 1 | ಡಾ. ಎ.ಹೆಚ್.ಶಿವಯೋಗಿಸ್ವಾಮಿ | ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರ |
| 2 | ಶ್ರೀ ಮೋಹನ್ ಎ ಲಿಂಬಿಕಾಯಿ (ರಾಜೀನಾಮೆ ಕಾರಣದಿಂದ ತೆರವು) | ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರ |
| 3 | ಶ್ರೀ ಶಶಿಲ್ ಜಿ ನಮೋಶಿ (ರಾಜೀನಾಮೆ ಕಾರಣದಿಂದ ತೆರವು) | ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರ |
| 4 | ಶ್ರೀ ಪುಟ್ಟಣ್ಣ | ಬೆಂಗಳೂರು ಶಿಕ್ಷಕರ ಕ್ಷೇತ್ರ |

2. ಈ ಮೇಲ್ಕಂಡಂತೆ ತೆರವಾಗಲಿರುವ ಸ್ಥಾನಗಳನ್ನು ತುಂಬಲು ಈ ಕೆಳಕಂಡ ಕಾರ್ಯಸೂಚಿಯಂತೆ ದ್ವೈವಾರ್ಷಿಕ ಚುನಾವಣೆಗಳನ್ನು ನಡೆಸಲು ಭಾರತ ಚುನಾವಣಾ ಆಯೋಗವು ನಿರ್ಧರಿಸಿರುತ್ತದೆ:-

| | | |
|---|---|---|
| 1 | ಅಧಿಸೂಚನೆ ಹೊರಡಿಸುವ ದಿನಾಂಕ | **27ನೇ ಮೇ, 2014 (ಮಂಗಳವಾರ)** |
| 2 | ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನಾಂಕ | **3ನೇ ಜೂನ್, 2014 (ಮಂಗಳವಾರ)** |
| 3 | ನಾಮಪತ್ರಗಳ ಪರಿಶೀಲನೆ ದಿನಾಂಕ | **4ನೇ ಜೂನ್, 2014 (ಬುಧವಾರ)** |
| 4 | ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳಲು ಕೊನೆಯ ದಿನಾಂಕ | **6ನೇ ಜೂನ್, 2014 (ಶುಕ್ರವಾರ)** |
| 5 | ಮತದಾನದ ದಿನಾಂಕ | **20ನೇ ಜೂನ್, 2014 (ಶುಕ್ರವಾರ)** |
| 6 | ಮತದಾನದ ವೇಳೆ | **ಬೆಳಿಗ್ಗೆ 8-00 ಗಂಟೆಯಿಂದ ಸಂಜೆ 4-00 ಗಂಟೆಯವರೆಗೆ** |
| 7 | ಮತಗಳ ಎಣಿಕೆ | **24ನೇ ಜೂನ್, 2014 (ಮಂಗಳವಾರ) ಬೆಳಿಗ್ಗೆ 8-00 ಗಂಟೆಯಿಂದ** |
| 8 | ಚುನಾವಣೆಯನ್ನು ಮುಕ್ತಾಯಗೊಳಿಸಬೇಕಾದ ದಿನಾಂಕ | **28ನೇ ಜೂನ್, 2014 (ಶನಿವಾರ) ರ ಒಳಗಾಗಿ** |

3. ಸದರಿ ಚುನಾವಣೆಗೆ ಸ್ಪರ್ಧಿಸುವ ವ್ಯಕ್ತಿಗಳ ವಯಸ್ಸು ಮೂವತ್ತು ವರ್ಷಕ್ಕೂ ಕಡಿಮೆ ಇರಕೂಡದು ಮತ್ತು ಅವರು ಕರ್ನಾಟಕದ ಯಾವುದಾದರೂ ಒಂದು ವಿಧಾನ ಸಭಾ ಕ್ಷೇತ್ರದಲ್ಲಿ ಮತದಾರರಾಗಿರಬೇಕು ಹಾಗೂ ಅವರು ಯಾವುದೇ ಕಾನೂನಿನ ಅಡಿಯಲ್ಲಿ ಅನರ್ಹರಾಗಿರಬಾರದು.

4. ಸದರಿ ದ್ವೈವಾರ್ಷಿಕ ಚುನಾವಣೆಗಳಿಗೆ ಸಂಬಂಧಪಟ್ಟ ಕ್ಷೇತ್ರಗಳ ಮತದಾರರ ಪಟ್ಟಿಯಲ್ಲಿ ನೋಂದಾಯಿತರಾದ ಪದವೀಧರರು/ಶಿಕ್ಷಕರು ಮಾತ್ರ ಮತದಾರರಾಗಿರುತ್ತಾರೆ.

5. ಪದವೀಧರರ ಮತ್ತು ಶಿಕ್ಷಕರ ಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1950 ರ ಕಲಂ 22 ಮತ್ತು 23 ರನ್ವಯ ನಿರಂತರವಾಗಿ ಕಾಲೋಚಿತಗೊಳಿಸತಕ್ಕದ್ದಾಗಿರುತ್ತದೆ. ಹೇಗಾದರೂ, ಮತದಾರರ ಪಟ್ಟಿಗಳನ್ನು ಕಡೆಯದಾಗಿ ತಯಾರಿಸಿದ/ಪರಿಷ್ಕರಿಸಿದ ಕಾಲಕ್ಕೆ ಗಣನೆಗೆ ತೆಗೆದುಕೊಂಡಿದ್ದ ಅರ್ಹತಾ ದಿನಾಂಕ, ಅಂದರೆ, **01-11-2013 ರ ದಿನಾಂಕವೇ** ಈ ಮೇಲ್ಕಂಡ ಕ್ಷೇತ್ರಗಳ ಮತದಾರರ ಪಟ್ಟಿಗಳನ್ನು ನಿರಂತರವಾಗಿ ಕಾಲೋಚಿತಗೊಳಿಸುವ ಪ್ರಕ್ರಿಯೆಗೂ ಮುಂದುವರೆದಿರತಕ್ಕದ್ದಾಗಿರುತ್ತದೆ.

6. ಸದರಿ ಚುನಾವಣೆಗಳಿಗೆ ಸಂಬಂಧಿಸಿದಂತೆ ಚುನಾವಣಾಧಿಕಾರಿಗಳು ಹಾಗೂ ಅವರುಗಳ ಕ್ಷೇತ್ರ ವ್ಯಾಪ್ತಿಯ ವಿವರಗಳು ಈ ಕೆಳಕಂಡಂತಿರುತ್ತವೆ:-

| ಪದವೀಧರರ ಕ್ಷೇತ್ರಗಳು | ಚುನಾವಣಾಧಿಕಾರಿಗಳು | ಕ್ಷೇತ್ರ ವ್ಯಾಪ್ತಿ |
|---|---|---|
| ಕರ್ನಾಟಕ ಆಗ್ನೇಯ ಪದವೀಧರರ ಕ್ಷೇತ್ರ | ಪ್ರಾದೇಶಿಕ ಆಯುಕ್ತರು, ಬೆಂಗಳೂರು. | ಚಿತ್ರದುರ್ಗ, ದಾವಣಗೆರೆ (ಚನ್ನಗಿರಿ, ಹೊನ್ನಾಳಿ ಹಾಗೂ ಹರಪನಹಳ್ಳಿ ತಾಲ್ಲೂಕುಗಳನ್ನು ಹೊರತುಪಡಿಸಿ), ತುಮಕೂರು, ಕೋಲಾರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳು. |
| ಕರ್ನಾಟಕ ಪಶ್ಚಿಮ ಪದವೀಧರರ ಕ್ಷೇತ್ರ | ಪ್ರಾದೇಶಿಕ ಆಯುಕ್ತರು, ಬೆಳಗಾವಿ | ಧಾರವಾಡ, ಹಾವೇರಿ, ಗದಗ ಹಾಗೂ ಉತ್ತರ ಕನ್ನಡ ಜಿಲ್ಲೆಗಳು. |
| **ಶಿಕ್ಷಕರ ಕ್ಷೇತ್ರಗಳು** | **ಚುನಾವಣಾಧಿಕಾರಿಗಳು** | **ಕ್ಷೇತ್ರ ವ್ಯಾಪ್ತಿ** |
| ಕರ್ನಾಟಕ ಈಶಾನ್ಯ ಶಿಕ್ಷಕರ ಕ್ಷೇತ್ರ | ಪ್ರಾದೇಶಿಕ ಆಯುಕ್ತರು, ಗುಲ್ಬರ್ಗಾ. | ಬೀದರ್, ಗುಲ್ಬರ್ಗಾ, ಯಾದಗಿರಿ, ರಾಯಚೂರು, ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳು ಮತ್ತು ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕು. |
| ಬೆಂಗಳೂರು ಶಿಕ್ಷಕರ ಕ್ಷೇತ್ರ | ಪ್ರಾದೇಶಿಕ ಆಯುಕ್ತರು, ಬೆಂಗಳೂರು. | ಬೆಂಗಳೂರು, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳು. |

7. ಈ ಮೇಲ್ಕಂಡ ದ್ವೈವಾರ್ಷಿಕ ಚುನಾವಣೆಗಳ ವೇಳಾಪಟ್ಟಿಯನ್ನು ದಿನಾಂಕ: 20-05-2014 ರಂದು ಭಾರತ ಚುನಾವಣಾ ಆಯೋಗವು ಪ್ರಕಟಿಸಿದ್ದು, ಸದರಿ ದಿನಾಂಕದಿಂದಲೇ ಅನ್ವಯವಾಗುವಂತೆ ರಾಜಕೀಯ ಪಕ್ಷಗಳು ಹಾಗೂ ಚುನಾವಣಾ ಅಭ್ಯರ್ಥಿಗಳ ಮಾರ್ಗದರ್ಶನಕ್ಕಾಗಿ ಭಾರತ ಚುನಾವಣಾ ಆಯೋಗದ ಪತ್ರ ಸಂಖ್ಯೆ 322/ಎಂಟಿ-ಎಲ್‌ಸಿ/2014(ಜಿ&ಟಿ)-ಸಿಸಿ&ಬಿಇ, ದಿನಾಂಕ: 20-05-2014 ರಲ್ಲಿ ಪ್ರಸ್ತಾಪಿಸಿರುವ **ಮಾದರಿ ನೀತಿ ಸಂಹಿತೆ ಅಂಶಗಳು ಜಾರಿಗೆ ಬಂದಿರುತ್ತವೆ.**

8. ಸದರಿ ಚುನಾವಣೆಗಳಿಗೆ ಸ್ಪರ್ಧಿಸಲಿಚ್ಛಿಸುವ ವ್ಯಕ್ತಿಗಳು ಚುನಾವಣಾಧಿಕಾರಿ/ಸಹಾಯಕ ಚುನಾವಣಾಧಿಕಾರಿಗಳ ಕಚೇರಿಗಳಲ್ಲಿ ಅಗತ್ಯ **ನಾಮಪತ್ರ ನಮೂನೆ-2ಇ, ಪರಿಷ್ಕೃತ ಪ್ರಮಾಣ ಪತ್ರ (Affidavit) ನಮೂನೆ-26** ಹಾಗೂ ಇತರೆ ನಮೂನೆಗಳನ್ನು ಪಡೆದುಕೊಳ್ಳಬಹುದು ಹಾಗೂ ಭರ್ತಿ ಮಾಡಿದ ಸದರಿ ನಮೂನೆಗಳನ್ನು ಮೇಲಿನ ಚುನಾವಣಾಧಿಕಾರಿಗಳ / ಅಧಿಸೂಚಿತ ಸಹಾಯಕ ಚುನಾವಣಾಧಿಕಾರಿಗಳ ಕಚೇರಿಗಳಲ್ಲಿ ಅಭ್ಯರ್ಥಿಯೇ ಸ್ವತಃ ಅಥವಾ ಅವರ ಸೂಚಕರ ಮುಖೇನ **ದಿನಾಂಕ: 27-05-2014** (ಮಂಗಳವಾರ) ರಿಂದ **03-06-2014** (ಮಂಗಳವಾರ) ರವರೆಗೆ (ಎರಡೂ ದಿನಗಳು ಸೇರಿದಂತೆ) ಬೆಳಿಗ್ಗೆ **11-00** ಗಂಟೆಯಿಂದ ಮಧ್ಯಾಹ್ನ **3-00** ಗಂಟೆಯವರೆಗೆ ಸಲ್ಲಿಸಬಹುದು. **ದಿನಾಂಕ: 01-06-2014 ರಂದು ಭಾನುವಾರ ಸಾರ್ವತ್ರಿಕ ರಜಾ ದಿನವಾಗಿರುವುದರಿಂದ ಆ ದಿನದಂದು ನೆಗೋಷಿಯೆಬಲ್ ಇನ್ಸುಟ್ರಮೆಂಟ್ಸ್ ಆಕ್ಟ್, 1881 ರನ್ವಯ ನಾಮಪತ್ರಗಳನ್ನು ಸ್ವೀಕರಿಸಲಾಗುವುದಿಲ್ಲ.**

9. ಮೇಲಿನ ಚುನಾವಣೆ ಸಂಬಂಧದಲ್ಲಿ ಸ್ಪರ್ಧಿಸಲಿಚ್ಛಿಸುವವರು ಗಮನಿಸಬೇಕಾದ ಒಂದು ಮುಖ್ಯ ಅಂಶವೇನೆಂದರೆ, 1951 ರ ಪ್ರಜಾ ಪ್ರಾತಿನಿಧ್ಯ ಅಧಿನಿಯಮದ ಕಲಂ 33 ರ ಮೂರನೇ ಪರಂತುಕದ ಪ್ರಕಾರ ಪ್ರತಿ ಅಭ್ಯರ್ಥಿಯ ನಾಮ ನಿರ್ದೇಶನ ಪತ್ರದಲ್ಲಿ ಆಯಾ ಚುನಾವಣಾ ಕ್ಷೇತ್ರದ ಹತ್ತು ಮತದಾರರು ಸೂಚಕರಾಗಿ ಸಹಿ ಮಾಡತಕ್ಕದ್ದಾಗಿರುತ್ತದೆ ಮತ್ತು ಪ್ರತಿ ಅಭ್ಯರ್ಥಿಯು ಸದರಿ ಅಧಿನಿಯಮದ ಕಲಂ 34 ರಂತೆ **ರೂ.10,000-00 (ಹತ್ತು ಸಾವಿರ ರೂಪಾಯಿಗಳು ಮಾತ್ರ)** ಠೇವಣಿ ಮಾಡಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಸೇರಿದವರು **ರೂ.5,000-00 (ಐದು ಸಾವಿರ ರೂಪಾಯಿಗಳು ಮಾತ್ರ)** ಠೇವಣಿ ಮಾಡತಕ್ಕದ್ದಾಗಿರುತ್ತದೆ.

10. **ಭಾರತ ಸರ್ವೋಚ್ಛ ನ್ಯಾಯಾಲಯದ ದಿನಾಂಕ: 13-09-2013 ರ ಆದೇಶದಂತೆ ಅಭ್ಯರ್ಥಿಗಳು ನಾಮಪತ್ರದೊಂದಿಗೆ ಸಲ್ಲಿಸುವ ಪ್ರಮಾಣ ಪತ್ರದಲ್ಲಿನ ಎಲ್ಲಾ ಅಂಕಣಗಳನ್ನು ಸೂಕ್ತ ಮಾಹಿತಿಯೊಂದಿಗೆ ಭರ್ತಿ ಮಾಡಿರತಕ್ಕದ್ದಾಗಿರುತ್ತದೆ.** ಪ್ರಮಾಣ ಪತ್ರದಲ್ಲಿನ ಯಾವುದಾದರೂ ಅಂಕಣವನ್ನು ಭರ್ತಿ ಮಾಡದೆ ಖಾಲಿ ಬಿಟ್ಟಿದ್ದಲ್ಲಿ ಚುನಾವಣಾಧಿಕಾರಿಗಳು ತತ್ಸಂಬಂಧದಲ್ಲಿ ಪೂರ್ಣ ಮಾಹಿತಿ ತುಂಬಿ ಹೊಸದಾಗಿ ಪ್ರಮಾಣ ಪತ್ರ ಸಲ್ಲಿಸುವಂತೆ ನೋಟೀಸು ನೀಡತಕ್ಕದ್ದಾಗಿರುತ್ತದೆ. ಆ ರೀತಿ ನೋಟೀಸು (ತಿಳುವಳಿಕೆ ಪತ್ರ) ನೀಡಿದ ನಂತರವೂ ಅಭ್ಯರ್ಥಿಯು ಸೂಚನೆಯನುಸಾರ ಪ್ರಮಾಣ ಪತ್ರವನ್ನು ಎಲ್ಲಾ ರೀತಿಯಲ್ಲೂ ಪರಿಪೂರ್ಣವಾಗಿರುವಂತೆ ಭರ್ತಿ ಮಾಡಿ ಸಲ್ಲಿಸಲು ವಿಫಲರಾದಲ್ಲಿ, ನಾಮಪತ್ರಗಳ ಪರಿಶೀಲನೆ ವೇಳೆಯಲ್ಲಿ ತತ್ಸಂಬಂಧದ ನಾಮಪತ್ರವು ತಿರಸ್ಕಾರ ಯೋಗ್ಯವಾಗಿರುತ್ತದೆ.

11. ಅಭ್ಯರ್ಥಿಗಳನ್ನು ಮಾನ್ಯತೆ ಪಡೆದ ರಾಜಕೀಯ ಪಕ್ಷಗಳು ಅಥವಾ ಮಾನ್ಯತೆ ಪಡೆಯದ ರಾಜಕೀಯ ಪಕ್ಷಗಳು ನಿಲ್ಲಿಸಿದ್ದರೂ ಸಹ ಅಥವಾ ಅಭ್ಯರ್ಥಿಗಳು ಸ್ವತಂತ್ರ ಅಭ್ಯರ್ಥಿಗಳು ಆಗಿದ್ದರೂ ಸಹಾ ಅಂತಹ ಅಭ್ಯರ್ಥಿಗಳು ಸಲ್ಲಿಸಿದ ಪ್ರಮಾಣ ಪತ್ರ (affidavit) ಗಳನ್ನು **ಅವುಗಳನ್ನು ಸಲ್ಲಿಸಿದ ಕೂಡಲೇ ಮತ್ತು 24 ಗಂಟೆಯೊಳಗಾಗಿ ಅಂತರ್ಜಾಲದಲ್ಲಿ ಅಳವಡಿಸಲಾಗುವುದು.** ತದನಂತರ ಯಾವುದೇ ಅಭ್ಯರ್ಥಿ ನಾಮಪತ್ರವನ್ನು ಹಿಂಪಡೆದರೂ ಸಹಾ ಈಗಾಗಲೇ ಅಂತರ್ಜಾಲದಲ್ಲಿ ಅಳವಡಿಸಿರುವ ಪ್ರಮಾಣ ಪತ್ರವನ್ನು ತೆಗೆದುಹಾಕ್ಕದ್ದಲ್ಲ.

12. ಪ್ರಮಾಣ ಪತ್ರ ಮತ್ತು ಮೇಲ್ಕಂಡ ನಮೂನೆ ಎಎ ಮತ್ತು ಬಿಬಿ ಗಳನ್ನು ನಾಮಪತ್ರದ ಜೊತೆಗೆ ಸಲ್ಲಿಸದಿದ್ದಲ್ಲಿ, ಅವುಗಳನ್ನು ನಾಮಪತ್ರಗಳನ್ನು ಸಲ್ಲಿಸಲು ನಿಗಧಿಪಡಿಸಿರುವ ಕೊನೆಯ **ದಿನಾಂಕ 03-06-2014 (ಮಂಗಳವಾರ) ರ ಅಪರಾಹ್ನ 3-00 ಗಂಟೆಯೊಳಗಾಗಿ** ಸಲ್ಲಿಸತಕ್ಕದ್ದಾಗಿರುತ್ತದೆ.

13. ಠೇವಣಿ ಮೊಬಲಗನ್ನು ನಾಮಪತ್ರ ಸಲ್ಲಿಸುವ ಮುಂಚೆ ಅಥವಾ ನಾಮಪತ್ರ ಸಲ್ಲಿಸುವ ಕಾಲದಲ್ಲಿ ಪಾವತಿಸತಕ್ಕದ್ದಾಗಿರುತ್ತದೆ.

14. ನಾಮಪತ್ರ ಸಲ್ಲಿಸಿದ ನಂತರ ಮತ್ತು ನಾಮಪತ್ರಗಳ ಪರಿಶೀಲನೆಗೆ ನಿಗಧಿಪಡಿಸಿರುವ ದಿನಾಂಕಕ್ಕೆ ಮೊದಲು ಪ್ರಮಾಣ ವಚನ / ದೃಢೀಕರಣವನ್ನು (Oath / Affirmation) ಮಾಡತಕ್ಕದ್ದಾಗಿರುತ್ತದೆ.

15. ಪ್ರಜಾ ಪ್ರಾತಿನಿಧ್ಯ ಅಧಿನಿಯಮ, 1951 ರ **ಕಲಂ 33(6)** ರಂತೆ ಯಾವುದೇ ಒಬ್ಬ ಅಭ್ಯರ್ಥಿಯು/ಅವರ ಪರವಾಗಿ **ನಾಲ್ಕು ನಾಮಪತ್ರಗಳವರೆಗೂ** ಸಲ್ಲಿಸಬಹುದಾಗಿರುತ್ತದೆ.

16. ಪ್ರಾಜಾ ಪ್ರಾತಿನಿಧ್ಯ ಅಧಿನಿಯಮ, 1951 ರ **ಕಲಂ 33(7)(ಸಿ)** ರಂತೆ ಈ ದ್ವೈವಾರ್ಷಿಕ ಚುನಾವಣೆಗಳಲ್ಲಿ ಯಾವುದೇ ಒಬ್ಬ ವ್ಯಕ್ತಿಯನ್ನು ರಾಜ್ಯದ **ಎರಡಕ್ಕಿಂತ ಹೆಚ್ಚಿನ ವಿಧಾನ ಪರಿಷತ್ ಕ್ಷೇತ್ರಗಳಲ್ಲಿ** ಉಮೇದುವಾರರಾಗಿ ಮಾಡತಕ್ಕದ್ದಲ್ಲ.

17. ಈ ಮೇಲ್ಕಂಡ ಕ್ಷೇತ್ರಗಳ ಚುನಾವಣೆಗಳು, ವರ್ಗಾಯಿಸಬಹುದಾದ ಏಕ ಮತದ ಮುಖಾಂತರ, ಪ್ರಾತಿನಿಧ್ಯಕ್ಕನುಸಾರವಾದ ವಿಧಾನದಡಿ ಜರುಗುತ್ತವೆ (Biennial Elections to Council Constituencies are held under the system of proportional representation by means of single transferable vote). ಮತದಾರನು ಮತಪತ್ರದಲ್ಲಿನ ಅಭ್ಯರ್ಥಿ(ಗಳ) ಹೆಸರು(ಗಳ) ಮುಂದೆ ತಮ್ಮ ಆಯ್ಕೆಯನುಸಾರ ಪ್ರಾಶಸ್ತ್ಯ(ಗಳ) ಮತವನ್ನು ಗುರುತು ಮಾಡತಕ್ಕದ್ದಾಗಿರುತ್ತದೆ. ಚುನಾಯಿಸಬೇಕಾದ ಅಭ್ಯರ್ಥಿಗಳ ಸಂಖ್ಯೆ ಎಷ್ಟೇ ಇದ್ದರೂ, ಸ್ಪರ್ಧಿಸಿರುವ ಅಭ್ಯರ್ಥಿಗಳ ಸಂಖ್ಯೆಯಷ್ಟು ಪ್ರಾಶಸ್ತ್ಯಗಳು ಮತದಾರನಿಗೆ ಇರುತ್ತವೆ. ಈ ಪ್ರಾಶಸ್ತ್ಯಗಳನ್ನು ಅಂಕಿಗಳನ್ನು ನಮೂದಿಸುವ ಮೂಲಕ ಸೂಚಿಸಬಹುದು, ಅಂದರೆ, ಅಂತರರಾಷ್ಟ್ರೀಯ ರೂಪದ ಭಾರತೀಯ ಅಂಕಿಗಳನ್ನು ಅಥವಾ ರೋಮನ್ ಅಂಕಿಗಳನ್ನು ಅಥವಾ ಮನ್ನಣೆ ಪಡೆದಿರುವ ಯಾವುದೇ ಭಾರತೀಯ ಭಾಷೆಯಲ್ಲಿ ಬಳಕೆಯಲ್ಲಿರುವ ಅಂಕಿಗಳನ್ನು ನಮೂದಿಸಬಹುದು. ಆದರೆ, ಪದಗಳಲ್ಲಿ ನಮೂದಿಸಬಾರದು.

18. **ಭಾರತ ಸರ್ವೋಚ್ಛ ನ್ಯಾಯಾಲಯದ ದಿನಾಂಕ: 27-09-2013 ರ ಆದೇಶದನ್ವಯ ಮತಪತ್ರದಲ್ಲಿ ಸ್ಪರ್ಧಿಸಿರುವ ಅಭ್ಯರ್ಥಿಗಳ ಹೆಸರುಗಳ ಕೆಳಗೆ ಕೊನೆಯ ಅಂಕಣದಲ್ಲಿ (Last Panel) "ಮೇಲ್ಕಂಡ ಯಾರೂ ಅಲ್ಲ" (ಮೇ ಯಾ ಅ) ["None of the Above" (NOTA)] ಎಂಬ ಐಚ್ಛಿಕ (Option) ವನ್ನು ಸೇರಿಸಲಾಗುತ್ತದೆ. ಸ್ಪರ್ಧಿಸಿರುವ ಯಾವೊಬ್ಬ ಅಭ್ಯರ್ಥಿಗೂ ಮತ ನೀಡಲು ಬಯಸದ ಮತದಾರರು ಅವರ ಐಚ್ಛಿಕವನ್ನು ಈ ಮೇಲೆ ಪ್ರಸ್ತಾಪಿಸಿರುವ ನೋಟಾ (NOTA) ಐಚ್ಛಿಕದ ಎದುರು ಕ್ರಾಸ್ ಮಾರ್ಕ್ (X) ಅಥವಾ ಟಿಕ್ ಮಾರ್ಕ್ ( ✓ ) [by putting cross mark (X) or tick mark ( ✓ )] ಗುರುತು ಮಾಡುವ ಮೂಲಕ ಚಲಾಯಿಸಬಹುದಾಗಿರುತ್ತದೆ. ಈ ಗುರುತುಗಳನ್ನು ಹೊರತುಪಡಿಸಿದ ಇತರೆ ಗುರುತುಗಳನ್ನು ನೋಟಾ ಐಚ್ಛಿಕದ ಎದುರು ಮಾಡಿದಲ್ಲಿ ಅಂತಹ ಮತಪತ್ರವು ಅಸಿಂಧುಗೊಳ್ಳುತ್ತದೆ ಎಂದು ಸ್ಪಷ್ಟಪಡಿಸಿದೆ.**

19. ಹೆಚ್ಚಿನ ವಿವರಗಳಿಗಾಗಿ ಸಂಬಂಧಿಸಿದ ಚುನಾವಣಾಧಿಕಾರಿ/ಸಹಾಯಕ ಚುನಾವಣಾಧಿಕಾರಿಗಳನ್ನು ಸಂಪರ್ಕಿಸಬಹುದಾಗಿರುತ್ತದೆ.

(ಅನಿಲ್ ಕುಮಾರ್ ಝಾ)
ಮುಖ್ಯ ಚುನಾವಣಾಧಿಕಾರಿಗಳು ಹಾಗೂ
ಪದನಿಮಿತ್ತ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಿಆಸುಇ (ಚುನಾವಣೆಗಳು)